**-05-**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ
ನ್ಯಾಯಾಲಯ

**ಓ.ಎಸ್. ಸಂಖ್ಯೆ 213/2023**

**ದಿನಾಂಕ 03.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಿ.ಡಬ್ಲ್ಯೂ-1

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಪಿ ಟಿ ಆರ್ ವಕೀಲರಿಂದಃ**

1. ನಾನು 7 ನೇ ತರಗತಿವರೆಗೆ ವಿದ್ಯಬ್ಯಾಸ ಮಾಡಿದ್ದೇನೆ. ನಾನು ಡಿಸಿಸಿ ಬ್ಯಾಂಕಿನಲ್ಲಿ ವಾಹನ ಚಾಲಕನಾಗಿ ಕೆಲಸ ಮಾಡುತ್ತೇನೆ. ದಿ: 18.12.2020 ರಂದು ಪಾವಗಡದ ಡಿಸಿಸಿ ಬ್ಯಾಂಕಿನಲ್ಲಿ ಕರ್ತವ್ಯ ಮಾಡುತ್ತಿದ್ದೆ. ಪ್ರತಿವಾದಿ ನನ್ನ ಸೋದರ ಮಾವ. ಪ್ರತಿವಾದಿ ಕೂಲಿ ಕೆಲಸ ಮತ್ತು ವ್ಯವಸಾಯ ಮಾಡುತ್ತಾರೆ. 1991 ರಿಂದ 2019 ರವರೆಗೆ ತುಮಕೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ತುಮಕೂರಿನಲ್ಲಿ ಒಬ್ಬನೇ ವಾಸವಿದ್ದೆ.

2. ನಾನು ಕ್ರಯದ ಕರಾರು ಒಪ್ಪಂದ ಪತ್ರವನ್ನು ನನ್ನ ಹೆಂಡತಿಯ ಹೆಸರಿಗೆ ಮಾಡಿಸಿಕೊಂಡು ಪ್ರತಿವಾದಿಗೆ ಹಣ ಕೊಟ್ಟಿದ್ದೇನೆ. ಪ್ರತಿವಾದಿಗೆ ಕೊಟ್ಟ ಹಣ ನನ್ನ ಹಣ ಅಲ್ಲ, ನನ್ನ ಹೆಂಡತಿಯ ಹಣ. ಪ್ರತಿವಾದಿ ಹಣ ಕೇಳಲು ನಮ್ಮ ಮನೆಯ ಹತ್ತಿರ ಬಂದಿದ್ದರು, ನನ್ನ ಹೆಂಡತಿ ಒಡವೆ ಕೊಳ್ಳಲು ಹಣ ಇಟ್ಟಿದ್ದರು, ಆ ಹಣವನ್ನು ಪ್ರತಿವಾದಿ ತನಗೆ ಕೊಡಲು ಹೇಳಿ ನನ್ನ ಹೆಂಡತಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿರುತ್ತಾರೆ. ಪ್ರತಿವಾದಿ ನನ್ನ ಹೆಂಡತಿಯ ಬಳಿ ಬಂದು ಹಣ ಕೇಳಿದ ದಿನಾಂಕ ಮತ್ತು ಸಮಯ ನನಗೆ ಹೇಳಲು ಆಗುವುದಿಲ್ಲ. ಹಣ ಕೇಳಲು ಬಂದಾಗ ನಾನು ನನ್ ಹೆಂಡತಿ ನಮ್ಮ ಮನೆಯಲ್ಲಿದ್ದೆವು.

ಪ್ರತಿವಾದಿ ಮತ್ತು ಪ್ರತಿವಾದಿ ಹೆಂಡತಿ ನಮ್ಮ ಮನೆಗೆ ಹಣ ಕೇಳಲು ಬಂದಿದ್ದರು. ರಾತ್ರಿ ಸುಮಾರು 7.30 ರ ಸಮಯದಲ್ಲಿ ಪ್ರತಿವಾದಿ ಹಣ ಕೇಳಲು ನಮ್ಮ ಮನೆಗೆ ಬಂದಿದ್ದರು.

3. ದಾವಾ ಆಸ್ತಿಯ ಮಾತುಕತೆ ಸಮಯದಲ್ಲಿ ಮುಂಗಡವಾಗಿ ರೂ. 2,50,000/- ಹಣವನ್ನು ಪ್ರತಿವಾದಿಗೆ ಕೊಟ್ಟಿದ್ದೇವೆ ಹಾಗೂ ಅದೇ ದಿನ ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿದ್ದೇವೆ. ಕ್ರಯದ ಕರಾರು ಪತ್ರದ ಮಾತುಕತೆ ಆದ ಒಂದು ವಾರದ ನಂತರ ಕ್ರಯದ ಕರಾರು ಪತ್ರ ಮಾಡಿಸಿಕೊಂಡಿದ್ದೇವೆ. ಕ್ರಯದ ಕರಾರು ಪತ್ರವನ್ನು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಬರೆಯಲಾಗಿದೆ. ಕ್ರಯದ ಕರಾರು ಪತ್ರ ಬರೆಯುವಾಗ ಗೋವಿಂದರಾಜು, ಕೃಷ್ಣಪ್ಪ, ಆಂಜಿನಪ್ಪ, ಹನುಮಂತಪ್ಪ, ಪಾರ್ವತಮ್ಮ ಮತ್ತು ಪುನೀತ್ ಕುಮಾರ್ ಇದ್ದರು. ಆ ದಿನ ನಾನು ಕೆಲಸದಲ್ಲಿದ್ದು, ಕ್ರಯದ ಕರಾರು ಪತ್ರ ಬರೆದ ಸ್ಥಳದಲ್ಲಿ ಇರಲಿಲ್ಲ.

4. ಪ್ರತಿವಾದಿ ಸಾಲ ಮಾಡಿದ್ದೇವೆ ಯಾರಿಗೋ ತುರ್ತಾಗಿ ಹಣ ಕೊಡಬೇಕು ಎಂದು ನಮ್ಮನ್ನು ಸಾಲ ಕೇಳಿದ್ದರು. ದಾವಾ ಆಸ್ತಿಗೆ ಕ್ರಯದ ಕರಾರು ಪತ್ರ ಆಗಿದೆ ಎಂದು ಗೋವಿಂದರಾಜು ರವರು ತಯಾರಿಸಿ ಓದಿದ ನಂತರ ನನಗೆ ತಿಳಿಯಿತು.

<u>ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.</u>

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ